ಮೆ : ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಬೀಳಗಿ ಇವರ ನ್ಯಾಯಾಲಯದಲ್ಲಿ

ಸಿ.ಸಿ.ನಂ.5/2022

CW-1 / PW-1

| | | |
|---|---|---|
| ಸಾಕ್ಷಿದಾರರ ಹೆಸರು | : | ದಾನಯ್ಯ ಪೂಜಾರಿ |
| ತಂದೆಯ ಹೆಸರು | : | ಗುರಪಾದಯ್ಯ |
| ವಯಸ್ಸು | : | 61 |
| ಉದ್ಯೋಗ | : | ನಿವೃತ್ತ ಶಿರಸ್ತೇದಾರರು |
| ವಾಸಸ್ಥಳ | : | ಜಮಖಂಡಿ |

ದಿನಾಂಕ: **29-06-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ : ಎ.ಪಿ.ಪಿ. ಯವರಿಂದ.

ನಾನು ಬೀಳಗಿಯಲ್ಲಿ 2018 ರಿಂದ 2023 ರವರೆಗೆ ಆಹಾರ ಶಿರಸ್ತೇದಾರರು ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು. 02.07.2021 ರಂದು ನಾನು ಕಚೇರಿಗೆ ಬರುತ್ತಿದ್ದಾಗ ಗಲಗಲಿಯ ಖಾಜಿ ಕಟ್ಟಿ ಏರಿಯಾದಲ್ಲಿ ಪುಂಡಲಿಕ ಜೈನಾಪೂರ ಅವರ ಮನೆಯಲ್ಲಿ ಮುಂದುವರೆದು ಪಾಂಡು ಜೈನಾಪೂರ ಮನೆಯಲ್ಲಿ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಹಂಚಿಕೆ ಮಾಡುವ ಅಕ್ಕಿಯನ್ನು ಸಂಗ್ರಹ ಮಾಡಿರುತ್ತಾರೆಂದು ಪೋನ್ ಮೂಲಕ ಮಾಹಿತಿ ಬಂದಿರುತ್ತದೆ ತಹಶೀಲ್ದಾರ ಅವರ ಅನುಮತಿ ಪಡೆದು ನಾನು ಚಾಸಾ -4 ಮತ್ತು 5 ರವರೊಂದಿಗೆ ಗಲಗಲಿಗೆ ಹೋಗಿ ಪೋಲೀಸ ಚೌಕಿಗೆ ಹೋಗಿ ಮಾಹಿತಿ ನೀಡಿ ಚಾಸಾ -6 ಮತ್ತು 7 ರವರನ್ನು ಕರೆದುಕೊಂಡು ಖಾಜಿ ಕಟ್ಟಿ ಏರಿಯಾಕ್ಕೆ ಹೋದೆವು. ಜೈನಾಪೂರ ಅವರನ್ನು ಹೋಗಿ ನೋಡಲಾಗಿ ಸರ್ಕಾರಿ ಅಕ್ಕಿ ಕಳ್ಳತನ ಮಾಡಿರುವುದು ಕಂಡು ಬಂದಿರುತ್ತದೆ . ಇಬ್ಬರು ಪಂಚರನ್ನು ಬರಮಾಡಿಕೊಂಡೆವು. ಚಾಸಾ -2 ಮತ್ತು 3 ರವರಿಗೆ ಮಾಹಿತಿ ನೀಡಿದೇವು . ಭಾವಿ ಮುರಿದು ಸದರಿ ಅಕ್ಕಿಯನ್ನು ಚಾಸಾ -2 ಮತ್ತು 3 ರವರ ಸಮಕ್ಷಮ ಅಮಾನತು ಪಡಿಸಿಕೊಂಡೆವು. ಮಹಜರ್ ನಲ್ಲಿನ ನನ್ನ ಸಹಿಯನ್ನು ನೋಡಿ ಗುರುತಿಸಿದೆನು. ಮಹಜರ್ ಅನ್ನು ನಿಪಿ-1 ಎಂದು ನನ್ನ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಟಾಟಾ ಏಸಿ ಗಾಡಿಯನ್ನು ಕರೆಸಿ ಗಾಡಿಯಲ್ಲಿ ಹಾಕಿಕೊಂಡು ಪಿ ಕೆ ಪಿ ಎಸ್ ಗಲಗಲಿಯಲ್ಲಿ ತೂಕ ಮಾಡಿಸಿದೇವು. ಒಟ್ಟು 29 ಬ್ಯಾಗಗಳು ಇದ್ದವು. ಎಲ್ಲಾ ಚೀಲಗಳಲ್ಲಿ ಕೂಡಿ 1580 ಅಕ್ಕಿ ಇತ್ತು. ಪಂಚರ ಸಮಕ್ಷಮ 4 ರಿಂದ 5 ಕೆ ಜಿ ಸ್ಯಾಂಪಲ್‌ಗಾಗಿ ತೆಗೆದುಕೊಂಡಿರುತ್ತೇವೆ. ನಂತರ ಠಾಣೆಗೆ ಬಂದು ನಾನು ದೂರು ನೀಡಿರುತ್ತೇನೆ. ದೂರನ್ನು

ನಿಪಿ - 2 ಎಂದು ನನ್ನ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಅಕ್ಕಿಯ ಭಾವ ಚಿತ್ರ ಗಳನ್ನು ನೋಡಿ ಗುರುತಿಸಿದೆನು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ವ.ಕೇ.ಸರಿ ಅದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,ಬೀಳಗಿ.